


ಮನೆಯೊಂದರಲ್ಲಿ ಹುಡುಗಿಯೊಬ್ಬಳು ಕೆಲಸ ಮಾಡುತ್ತಿದ್ದಳು. ಅವಳು ಹಪ್ಪಳವನ್ನು ಅಂಗಳದಲ್ಲಿ ಒಣಗಲು ಹಾಕಿ, ಒಳಗೆ ಬಂದು ಕುಳಿತುಕೊಳ್ಳುವಷ್ಟರಲ್ಲಿ ಮಳೆ ಬರುತ್ತದೆ. ಆಕೆ ಓಡೋಡಿ ಹಪ್ಪಳವನ್ನು ಎತ್ತಿಕೊಂಡು ಒಳಗೆ ಬರುವಷ್ಟರಲ್ಲಿ ಬಿಸಿಲು ಬರುತ್ತದೆ. ನಾಲ್ಕಾರು ಸಲ ಹಾಗೆ ಮಾಡಿ, ಬೇಸತ್ತ ಹುಡುಗಿ- 'ಹಗಲಿನಲ್ಲಿ ಹೀಗೆ ಮಳೆ ಬಂದರೆ, ಹಪ್ಪಳ ಒಣಗಿಸೋದು ಹೇಗೆ? ರಾತ್ರಿಯಾದರೂ ಬರಬಾರದೇ?' ಎಂದು ಗೊಣಗುತ್ತಾಳೆ. ಅದನ್ನು ಮಳೆರಾಯ ಕೇಳಿಸಿಕೊಳ್ಳುತ್ತಾನೆ. ಅದೇ ರಾತ್ರಿ ಸುಂದರ ಹುಡುಗನಾಗಿ ಅವಳ ಕೊಠಡಿಗೆ ಬರುತ್ತಾನೆ. 'ಯಾರು ನೀನು? ಯಾಕೆ ಬಂದೆ?' ಎಂದು ಆಕೆ ಕೇಳಿದರೆ, 'ರಾತ್ರಿ ಬಾ ಅಂದೆಯಲ್ಲ, ಅದಕ್ಕೆ ಬಂದೆ' ಅನ್ನುತ್ತಾನೆ ಮಳೆರಾಯ. ಮಳೆರಾಯನಿಗೂ ಅವಳಿಗೂ ಪ್ರೀತಿ ಬೆಳೆಯುತ್ತದೆ. ಸ್ವಲ್ಪ ಕಾಲ ಎಲ್ಲವೂ ಚೆನ್ನಾಗಿಯೇ ನಡೆಯಿತು. ಒಂದು ದಿನ, ಮಳೆರಾಯ ಮಾತಿನ ಗಿಣಿಯ ಮೂಲಕ ಆಕೆಗೊಂದು ಹಸಿರು ಸೀರೆ ಕಳಿಸುತ್ತಾನೆ. ಆ ಗಿಣಿ ಹಾರಿ ಬರುವಾಗ ಹಾದಿಯಲ್ಲಿ ಸೀರೆಯೊಳಗೆ ಮುಳ್ಳು ಸೇರಿಸುತ್ತದೆ. ಅದು ಗೊತ್ತಾಗದೆ ಹುಡುಗಿ ಸೀರೆ ಉಟ್ಟುಕೊಂಡಾಗ ಮೈಯೆಲ್ಲ ಪರಚಿ ರಕ್ತ ಬರುತ್ತದೆ. 'ಅಯ್ಯೋ ನಾನು ಮಳೆರಾಯಂಗೇನು ಅನ್ಯಾಯ ಮಾಡಿದೆ?' ಎಂದು ಬೇಜಾರು